ಬೆರಕೆ ದೇಹ ಹೊತ್ತು ಶೆಡ್ಡಿನಲ್ಲಿ ಬಿದ್ದಿರಬೇಕಾಯಿತು.

ಈ ಎಲ್ಲ ಬೆರಕೆ ದೇಹದ ಶೆಡ್ ವಾಸಿಗಳು ತತ್ತರ ನಡುಗಿದ್ದು ದೇವಲೋಕದ ಈ ಎರಡು ಪ್ರಶ್ನೆಗಳಿಂದ. (1) ಕೃತಕ ಅಂಗ ಅಥವಾ ಸಾಧನ ನಿಮ್ಮ ದೇಹ ಸೇರಿದ ದಿನಾಂಕವೇನು? (2) ಅದು ನಿಮ್ಮ ದೇಹ ಸೇರಲು ಕಾರಣರಾದವರ ಹೆಸರು ಮತ್ತು ವಿಳಾಸವೇನು?

ಈ ಪ್ರಶ್ನೆಗಳಿಗೆ ಉತ್ತರವನ್ನೊಳಗೊಂಡಂತೆ ಎಲ್ಲ ವಿವರಗಳು ದೇವಲೋಕದ ಕಡತಗಳಲ್ಲಿ ಇದ್ದವು. ತಪ್ಪು ಅಥವಾ ಸುಳ್ಳು ಉತ್ತರ ಕೊಟ್ಟರೆ ಸಾವಿಲ್ಲದ ದೇವಲೋಕದಲ್ಲಿ ಸಾಯುವತನಕ ಶೆಡ್ ವಾಸದ ಶಿಕ್ಷೆಯಾಗುತ್ತಿತ್ತು. ಈ ಪ್ರಶ್ನೆಗಳಿಂದ ಎಲ್ಲರೂ ಆಘಾತಕ್ಕೊಳಗಾದರು. ಕೃತಕ ವಸ್ತು ತಮ್ಮ ದೇಹ ಸೇರಿದ ದಿನಾಂಕ ಹೇಗೆ ಹೇಳುವುದು? ಅದರಲ್ಲಿ ಅನೇಕರು ನೆನಪಿನ ಶಕ್ತಿಯನ್ನು ಸಂಪೂರ್ಣ ಕಳೆದುಕೊಂಡಿದ್ದರು. ಅವರಿಗೆ ತಮ್ಮ ಹೆಸರು, ವಿಳಾಸ ಕೂಡ ಮರೆತು ಹೋಗಿದ್ದವು. ಶಸ್ತ್ರಚಿಕಿತ್ಸೆ ಮಾಡಿ ಸಾಧನಗಳನ್ನು ಅಳವಡಿಸಿದ ವೈದ್ಯನ ಹೆಸರು, ವಿಳಾಸ ಹೇಗೆ ಹೇಳುವುದು? ವೈದ್ಯರ ತಂಡ ಶಸ್ತ್ರಚಿಕಿತ್ಸೆ ಮಾಡಿದ್ದರೆ, ಎಲ್ಲ ವೈದ್ಯರ ವಿವರ ಹೇಳಬೇಕೋ ಅಥವಾ ಪ್ರಧಾನ ವೈದ್ಯನ ವಿವರ ಹೇಳಿದರೆ ಸಾಕೋ? ರಣರಂಗದಲ್ಲಿ ಗುಂಡು ಹಾರಿಸಿದ್ದ ಶತ್ರು ಪಾಳೆಯದ ಯೋಧನ ಹೆಸರು, ವಿಳಾಸ ಹೇಗೆ ಗೊತ್ತು ಮಾಡಬೇಕು? ಅವನು ಬೇಕೆಂದೇ ಗುಂಡು ಹಾರಿಸಿಲ್ಲ, ಎಲ್ಲಿಗೋ ಬಡಿದು ಇವನ ಕಡೆ ಸಿಡಿದು ಬಂದಿತ್ತು! ಇಡೀ ಶೆಡ್ಡು ರೋಧಿಸುವವರ, ವ್ಯಸನಕ್ಕೆ ಬಿದ್ದವರ, ರೊಚ್ಚಿಗೆದ್ದವರ, ಖಿನ್ನತೆಗೊಳಗಾದವರ, ಹುಚ್ಚರ ಸಂತೆಯಾಯಿತು.

ಕುಟುಂಬ ಕಲ್ಯಾಣದ ಚತುರೋಪಾಯವಾದ ಕಾಪರ್‌ಟಿಯನ್ನು ಅಳವಡಿಸಿಕೊಂಡಿದ್ದ 'ಡಿಂಗ್ ಡಾಂಗ್' ದೇಶದ ವಿಧವೆ ಮಹಾರಾಣಿ ತಾನು ಯಾಕಾದರೂ ಸತ್ತೆನೋ ಎಂದು ಎದುರಿದ್ದವರನ್ನೆಲ್ಲಾ ವಾಚಾಮಗೋಚರ ಉಗಿಯತೊಡಗಿದಳು. ಆಕೆ ತಾನಿನ್ನೂ ಮಹಾರಾಣಿ ಎಂದು ಬಗೆದಿದ್ದಳು. ಲೈಂಗಿಕ ಶಕ್ತಿಯನ್ನು ವೃದ್ಧಿಸಿಕೊಳ್ಳಲು ನಿರಂತರವಾಗಿ ಮಾತ್ರೆಗಳನ್ನು ನುಂಗುತ್ತಿದ್ದ ಧಾರ್ಮಿಕ ಮುಖಂಡನೊಬ್ಬ ದೇವಲೋಕದವರ ಕಣ್ತಪ್ಪಿಸಿ ಎಲ್ಲ ಪರೀಕ್ಷೆಗಳಿಂದ ತಪ್ಪಿಸಿಕೊಂಡು ಅಲ್ಲಿ ಇಲ್ಲಿ ಠಳಾಯಿಸತೊಡಗಿದ. ಆಂಟಿಬಯೋಟಿಕ್ಸ್ ಮಾತ್ರೆ ತೆಗೆದುಕೊಳ್ಳುವ ಅವಧಿಯಲ್ಲಿ ಕೊನೆಯುಸಿರೆಳೆದಿದ್ದ ನೊಬೆಲ್ ಪ್ರಶಸ್ತಿ ವಿಜೇತ ವಿಜ್ಞಾನಿಯೊಬ್ಬ ತಾನು ಪೆನ್ಸಿಲಿನ್ ಔಷಧ ಸೇವಿಸಲು ಕಾರಣ ವೈದ್ಯನೋ? ಔಷಧಿ ಅಂಗಡಿಯವನೋ? ಔಷಧ ತಯಾರಿಕಾ ಕಂಪನಿಯೋ? ಅಥವಾ ಪೆನ್ಸಿಲಿನ್ ಕಂಡು ಹಿಡಿದ ಅಲೆಕ್ಸಾಂಡರ್ ಫ್ಲೆಮಿಂಗನೋ? ಅಥವಾ ಖಾಯಿಲೆಗೆ ಕಾರಣವಾದ ಬ್ಯಾಕ್ಟೀರಿಯಾ, ವೈರಸ್ ಹೆಸರು ಹೇಳಬೇಕೋ? ಅಥವಾ ಇವುಗಳನ್ನೆಲ್ಲ ಸೃಷ್ಟಿಸಿದ ದೇವರನ್ನು ಹೆಸರಿಸಬೇಕೋ ಎಂದು ತಿಳಿಯದೆ ತಗಾದೆ ತೆಗೆದ. ವಿಜ್ಞಾನಿಯ ಪ್ರಶ್ನೆಗೆ ತತ್ತರಿಸಿ ಹೋದ ದೇವಲೋಕದ ಬುದ್ಧಿವಂತರು, ವಿಜ್ಞಾನಿಯ ವಿಚಾರಣೆಯನ್ನು ಪೆಂಡಿಂಗ್ ಇಟ್ಟು ಮುಂದಿನ ಪ್ರಜೆಯತ್ತ ಸಾಗಿದವರು ಮತ್ತೆ ವಿಜ್ಞಾನಿಯತ್ತ ತಿರುಗಿ ನೋಡಲೇ ಇಲ್ಲ. ಭಾಗಶಃ ದೇಶವನ್ನೇ ಕೊಂಡುಕೊಂಡಿದ್ದ ಶ್ರೀಮಂತನ ಮನದನ್ನೆಯೊಬ್ಬಳು ತನ್ನ ಸೌಂದರ್ಯವನ್ನು ಶಾಶ್ವತವಾಗಿರಿಸಿಕೊಳ್ಳಲು ಒಟ್ಟು 36 ಪ್ಲಾಸ್ಟಿಕ್ ಸರ್ಜರಿ ಮಾಡಿಸಿಕೊಂಡಿದ್ದಳು. ಆಕೆಯ ದೇಹದಲ್ಲಿದ್ದ ಕೃತಕ ಅಂಗಾಂಗಳು, ಸೌಂದರ್ಯ ವರ್ಧಕಗಳು, ಬಣ್ಣಗಳು, ಕ್ರೀಮುಗಳು, ರಾಸಾಯನಿಕಗಳನ್ನು ಕಂಡು ಹಿಡಿಯುತ್ತಾ ದೇವಲೋಕದ ಸ್ಕ್ಯಾನಿಂಗ್ ಮೆಷಿನ್ನುಗಳು ಕೆಟ್ಟು ಸ್ತಬ್ಧವಾದವು. ಆಕೆ ಭೂಮಂಡಲದ ಅನೇಕ ದೇಶಗಳನ್ನು ಗ್ರಹ ತಾರಾ ನಿಹಾರಿಕೆಯಂತೆ ತಿರುಗಿ ಚಿಕಿತ್ಸೆ ಪಡೆದಿದ್ದಳು.

ಹಗಲಿರುಳೆನ್ನದೆ ದೇವಲೋಕ ತುಂಬುತ್ತಿತ್ತು. ಹೊಸ ಕಾನೂನುಗಳು ಜಾರಿಯಾಗುವ ಮೊದಲು ಸುಲಭವಾಗಿ ಶೆಡ್ಡು ಖಾಲಿಯಾಗಿ ಬಿಡುತ್ತಿತ್ತು. ಮೇಲ್ವಿಚಾರಕರು ಕೆಲಸವಿಲ್ಲದೆ ಕೆಲವು ಸಲ ಆಕಳಿಸುತ್ತಲೋ, ನೊಣ ಹೊಡೆಯುತ್ತಲೋ ಕಾಲ ಕಳೆಯುತ್ತಿದ್ದರು. ಆದರೀಗ ಜನ ಶೆಡ್ಡಿನಲ್ಲಿ ಗಿಜಿಗಿರಿದು ಹೋದರು. ಶೆಡ್ಡು ಎಷ್ಟು ದೊಡ್ಡದಾದರೇನು ಜನರು ಮೂಗು ತೂರಿಸಲೂ ಜಾಗ ಇಲ್ಲದಂತಾಯಿತು.

ದೇವಲೋಕದ ಬುದ್ಧಿವಂತನೊಬ್ಬ ತನ್ನೆದುರಿನ ಕಂಪ್ಯೂಟರ್ ಪರದೆ ನೋಡಿ ಗಾಬರಿಯಿಂದ 'ಇಲ್ಲಿ ಕೇಳಿ. ನರಲೋಕದಲ್ಲಿ ಮತ್ತೊಂದು ಪ್ರಮಾದ ಜರುಗಿದೆ. ಗಂಡು ಹೆಣ್ಣಿನ ಮಿಲನವಿಲ್ಲದೆ ವೀರ್ಯಾಣು, ಅಂಡಾಣುಗಳು ಕೃತಕ ವಾತಾವರಣದಲ್ಲಿ ಅಂದರೆ